3. ಈ ಪದ್ದತಿಯಲ್ಲಿ ವಿದ್ಯಾರ್ಥಿಗಳು ಕಡಿಮೆ ಪಠ್ಯಕ್ರಮವನ್ನು ಅಭ್ಯಾಸ ಮಾಡಿ ಪರೀಕ್ಷೆ ಬರೆಯ ಬಹುದಾಗಿದೆ .

In this scheme students will study les potion & can write the exams in better way.

ಊ) ಸೆಮಿಸ್ಟರ್ ಪದ್ಧತಿಯಿಂದ ವಿದ್ಯಾರ್ಥಿಗಳು ಹೆಚ್ಚಿನ ಮಟ್ಟದಲ್ಲಿ ಗುರಿ ಯನ್ನು ಸಾಧಿಸುವುದಲ್ಲದೇ ಜ್ಞಾನ. ಹಾಗೂ ತರಬೇತಿ ಗುಣ ಮಟ್ಟವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಅವೈಜ್ಞಾನಿಕ ಎಂದು ಭಾವಿಸಲಾಗುವುದಿಲ್ಲ

Due to semester system the students can improve the level of skill & also can schore better marks this cannot be considered as unscientific.

ಋ) ಸದರಿ ಪದ್ದತಿಯನ್ನು ಕೇಂದ್ರ ಸರ್ಕಾರವು ಏಕಕಾಲಕ್ಕೆ ರಾಷ್ಟ್ರಾದ್ಯಂತ ವಿವರವಾದ ಅಧ್ಯಯನ ನಡೆಸಿ ಕಾರ್ಯ ರೂಪಕ್ಕೆ ತಂದಿರುತ್ತಾರೆ. ಈ ವಿಷಯವು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಇರುವುದಿಲ್ಲ.

The semester system is implemented all over india after detailed study by government of india this policy matter will not come under the perview of state government.

**ಟ್ರಸ್ಟ್ ಸಂಸ್ಥೆಗಳ ದೇವಾಲಯಗಳು**

**239(237); ಶ್ರೀ ಗೋಪಾಲಯ್ಯ .ಕೆ (ಮಹಾಲಕ್ಷ್ಮೀ ಲೇಔಟ)**

ಅ) 2010 ನೇ ಜನವರಿಯಿಂದ ಯಾವ ಯಾವ ಟ್ರಸ್ಟ್ / ಸಂಸ್ಥೆಗಳು ನಡೆಸುತ್ತಿದ್ದ ದೇವಸ್ಥಾನಗಳನ್ನು ಮುಜರಾಯಿ ಇಲಾಖೆ ತನ್ನ ಸುಪರ್ದಿಗೆ ತೆಗೆದುಕೊಂಡಿದೆ;

ಆ) ಈ ದೇವಸ್ಥಾನಗಳನ್ನು ವಶಪಡಿಸಿಕೊಳ್ಳಲು ಕಾರಣಗಳೇನು;

ಇ) ಮುಜರಾಯಿ ಇಲಾಖೆ ವಶಕ್ಕೆ ತೆಗೆದುಕೊಂಡ ದೇವಸ್ಥಾನಗಳಲ್ಲಿನ ಅಭಿವೃದ್ಧಿಗೆ ಹಾಗೂ ಆಡಳಿತ ನಿರ್ವಹಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಈ ರೀತಿ ವಶಪಡಿಸಿಕೊಂಡ ನಿರ್ಧಾರವನ್ನು ಪ್ರಶ್ನಿಸಿ ಯಾವ ದೇವಸ್ಥಾನಗಳ ಆಡಳಿತ ಮಂಡಳಿಯವರು ಕೋರ್ಟ್‌ಗೆ ಮೊರೆ ಹೋಗಿರುವರು;

ಉ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

**ಪ್ರಕಾಶ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕಾ, ಸಕ್ಕರೆ ಮತ್ತು ಮುಜರಾಯಿ ಸಚಿವರು)**

ಅ) 2010ನೇ ಜನವರಿಯಿಂದ ಈ ಕೆಳಕಂಡ ದೇವಾಲಯಗಳನ್ನು ಇಲಾಖಾ ಸುಪರ್ದಿಗೆ ತೆಗೆದುಕೊಳ್ಳಲಾಗಿದೆ.

1. ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಾಲಯ, ಮಹಾಲಕ್ಷ್ಮೀ ಬಡಾವಣೆ, ಬೆಂಗಳೂರು,

2. ಶ್ರೀ ಪ್ರಸನ್ನ ಗಣೇಶ ಮತ್ತು ಶ್ರೀ ವೆಂಕಟರಮಣಸ್ವಾಮಿ ದೇವಾಲಯ, ಸಂಪಂಗಿ ರಾಮನಗರ, ಬೆಂಗಳೂರು.

3. ಶ್ರೀ ಮಂಜುನಾಥಸ್ವಾಮಿ ದೇವಾಲಯ , ಸಾಣೆಗುರುವನಹಳ್ಳಿ – ಗ್ರಾಮ, ಉತ್ತರ ತಾಲ್ಲೂಕು, ಬೆಂಗಳೂರು.

4. ಶ್ರೀ ಆಂಜನೇಯಸ್ವಾಮಿ ದೇವಾಲಯ, ಬಂಡೆಟ್ಟ ರೋಡ್, ಬ್ಲಾಕ್ – ನಂ 21, ಬಳ್ಳಾರಿ ನಗರ.

5. ಶ್ರೀ ಅಹಲ್ಯಾದೇವಿ ದೇವಾಲಯ, ಆರತಿ ಉಕ್ಕಡ ಗ್ರಾಮ,– ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ.

6. ಶ್ರೀ ದುರ್ಗಾಂಬಿಕಾ ದೇವಾಲಯ, ದಾವಣಗೆರೆ ಟೌನ್,

7. ಶ್ರೀ ವಿನಾಯಕ ದೇವಾಲಯ, 4ನೇ ಬ್ಲಾಕ್ ಜಯನಗರ ಬೆಂಗಳೂರು

ಆ) ಹಣಕಾಸು ದುರುಪಯೋಗ,ದುರಾಡಳಿತ ಹಾಗೂ ಆಡಳಿತ ನಿರ್ವಹಣೆಯಲ್ಲಿ ಲೋಪದೋಷಗಳ ಬಗ್ಗೆ ಸಾರ್ವಜನಿಕ ಭಕ್ತಾಧಿಗಳಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳ ಕಾಯ್ದೆ 1997ರ ಸೆಕ್ಷನ್ 42 ಹಾಗೂ 43ರ ಅಡಿಯಲ್ಲಿ ವಿಚಾರಣೆ ನಡೆಸಿ ಆರೋಪಗಳು ಸಾಬೀತಾದ ಕಾರಣ ಸದರಿ ದೇವಾಲಯಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದೆ.

ಇ) ಈ ದೇವಾಲಯಗಳನ್ನು ಇಲಾಖೆಯ ವಶಕ್ಕೆ ತೆಗೆದುಕೊಂಡ ನಂತರದಲ್ಲಿ ದೈನಂದಿನ ಪೂಜಾ ಕೈಂಕರ್ಯಗಳನ್ನು ಹಾಗೂ ವಿಶೇಷ ಉತ್ಸವಾದಿಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ. ಭಕ್ತಾಧಿಗಳ ಅನುಕೂಲಕ್ಕಾಗಿ ದೇವಾಲಯಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ಈ) ಸರ್ಕಾರವು ಸ್ವಾಧೀನ ಪಡಿಸಿಕೊಂಡ ಈ ಕೆಳಕಂಡ ದೇವಾಲಯಗಳ ಆಡಳಿತ ಮಂಡಳಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿರುತ್ತಾರೆ:–

1. ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಾಲಯ, ಮಹಾಲಕ್ಷ್ಮೀ ಬಡಾವಣೆ, ಬೆಂಗಳೂರು,

2. ಶ್ರೀ ಮಂಜುನಾಥಸ್ವಾಮಿ ದೇವಾಲಯ, ಸಾಣೆಗುರುವನಹಳ್ಳಿ– ಗ್ರಾಮ, ಉತ್ತರ ತಾಲ್ಲೂಕು, ಬೆಂಗಳೂರು.

ಊ) ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳು ಇತ್ಯರ್ಥಕ್ಕೆ ಬಾಕಿಯಿದ್ದು ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

**ರಾಜ್ಯದಲ್ಲಿನ ಕೈಮಗ್ಗ ನೇಕಾರರ ಸಮಸ್ಯೆ**

**240 (238); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)**

ಅ) ರಾಜ್ಯದಲ್ಲಿ ಕೈಮಗ್ಗ ನೇಕಾರಿಕೆಯಲ್ಲಿ ತೊಡಗಿಸಿಕೊಂಡಿರತಕ್ಕ ಕುಟುಂಬಗಳೆಷ್ಟು;

ಆ) ಕೈಮಗ್ಗ ನೇಕಾರಿಕೆಯಲ್ಲಿ ವಿದ್ಯುತ್ ಮಗ್ಗಗಳನ್ನು ಅಳವಡಿಸುವ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆಯೇ;

ಇ) ಇದರಿಂದ ಕೈಮಗ್ಗ ನೇಕಾರರ ಕುಲಕಸುಬು ನಾಶವಾಗುವುದಿಲ್ಲವೇ?

ಈ) ಹಾಗಿದ್ದಲ್ಲಿ ಕೈಮಗ್ಗ ನೇಕಾರರಿಗೆ ಕೆಲಸವಿಲ್ಲದೆ ಬೀದಿಪಾಲಾಗುವ ಸಾಧ್ಯತೆಗಳನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಕೈಮಗ್ಗ ನೇಕಾರಿಕೆಯಲ್ಲಿ ವಿದ್ಯುತ್ ಮಗ್ಗಗಳನ್ನು ಅಳವಡಿಸುವ ಯೋಜನೆಯನ್ನು ತರಲು ಕಾರಣಗಳೇನು;

ಊ) ಈ ಯೋಜನೆಯನ್ನು ನಿಲ್ಲಿಸಲು ಸರ್ಕಾರ ಆಲೋಚಿಸುತ್ತದೆಯೇ?

**ಶ್ರೀ ಬಾಬುರಾವ್ ಚಿಂಚನಸೂರ್ (ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)**

ಅ) ಕೇಂದ್ರ ಸರ್ಕಾರದ 2009 – 10ನೇ ಸಾಲಿನ ಕೈಮಗ್ಗ ಗಣತಿಯಂತೆ ರಾಜ್ಯದಲ್ಲಿ 37680 ಕೈಮಗ್ಗ ನೇಕಾರರ ಕುಟುಂಬಗಳು ಇರುತ್ತವೆ.

ಆ) ಕೈಮಗ್ಗ ನೇಕಾರಿಕೆಯಲ್ಲಿ ವಿದ್ಯುತ್ ಮಗ್ಗಗಳನ್ನು ಅಳವಡಿಸುವ ಯೋಜನೆಯನ್ನು ಸರ್ಕಾರವು ಜಾರಿಗೆ ತಂದಿರುವುದಿಲ್ಲ.